# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.</u>

## <u>ಸಿ ಸಿ ನಂ. 15/2022</u>

**<u>ಫಿರ್ಯಾದಿದಾರರು :-</u>** ನೆಲೋಗಿ ಪೊಲೀಸ್ ಠಾಣೆ

**: ವಿರುದ್ಧ :**

**<u>ಆರೋಪಿತರು:</u>**

1. ಶಂಕರ ತಂದೆ ಈರಪ್ಪ ಮುರಡಿ
   ವಃ 22 ವರ್ಷ, ಉಃ ಚಾಲಕ
   ಸಾಃ ತಿಳಗೊಳ, ತಾಃ ಸಿಂಧಗಿ

**<u>ದೋಷಾರೋಪಣೆ</u>**

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

ಆರೋಪಿತರಾದ ನೀವು ದಿನಾಂಕ 17-05-2021 ರಂದು ಸಂಜೆ 05-00 ಗಂಟೆ ಸಮಯದಲ್ಲಿ ನೆಲೋಗಿ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಹುಲ್ಲೂರ ಗ್ರಾಮದ ಸೀಮಾಂತರದ ಭೀಮಾ ನದಿಯ ಮರಳು ದಕ್ಕಾದಿಂದ ಆರೋಪಿತನು ಟಿಪ್ಪರ ನಂ.ಕೆಎ-28/ಸಿ-6956 ನೆದ್ದರಲ್ಲಿ, ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ, ಕಳ್ಳತನ ಮಾಡುವ ಉದ್ದೇಶದಿಂದ ಸದರಿ ಟಿಪ್ಪರನಲ್ಲಿ ಸಾಗಾಣಿಕೆ ಮಾಡಲು ಮರಳನ್ನು ಕಳ್ಳತನದಿಂದ ತುಂಬಿರುತ್ತಿರಿ, ಆದ್ದರಿಂದ ನೀವು ಭಾ. ದಂ. ಸಂ. ಕಲಂ **379** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ **15-07-2025**

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**<u>ಆರೋಪಿಗಳ ಹೇಳಿಕೆ</u>**

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ: ಆ-

ಪ್ರಶ್ನೆ -2: ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ: ಆ-

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ **15-07-2025**

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.